# ರಾಜ್ಯ ಒಕ್ಕಲಿಗರ ಸಂಘ

# 148, ವಿಶ್ವೇಶ್ವರಪುರ, ಕೃಷ್ಣರಾಜೇಂದ್ರ ರಸ್ತೆ, ಬೆಂಗಳೂರು –560004, email: vokkaligarasangha-1906@hotmail.com

## ಒಕ್ಕಲಿಗರ ಸಂಘದ ಉದಯ 1906 ಏಪ್ರಿಲ್ 1

## ಸಂಕ್ಷಿಪ್ತ ವರದಿ

1906 ಏಪ್ರಿಲ್ 1 ರಂದು ಒಕ್ಕಲಿಗರ ಸಂಘದ ಉದಯಕ್ಕೆ ಮುನ್ನುಡಿ ಬರೆದ ದಿನ. ಬ್ಯಾರಿಸ್ಟರ್ ಬಿ. ನಾಗಪ್ಪ ತಹಶೀಲ್ದಾರ್ ಬಿ.ಎನ್. ಚೆನ್ನಿಗಪ್ಪನವರು ರೈತಾಪಿ ಜನರ ಸಮಸ್ಯೆಗಳನ್ನು ಚರ್ಚಿಸುತ್ತಿದ್ದಾಗ ಒಕ್ಕಲು ಮಕ್ಕಳ ಅಭ್ಯುದಯಕ್ಕೊಂದು ಸಂಘ ನಿರ್ಮಾಣದ ಕನಸು ಕಂಡರು. ಬ್ಯಾರಿಸ್ಟರ್ ಬಿ. ನಾಗಪ್ಪನವರು ತಮ್ಮ ಮಾವನವರಾದ ಉರಿಗದ ಟಿ. ಬೈಯಣ್ಣನವರ ಬಳಿ ಸಂಘ ಸ್ಥಾಪನೆಯ ಪ್ರಸ್ತಾವನೆಯನ್ನು ಮುಂದಿಟ್ಟರು. "ಒಕ್ಕಲಿಗರ ಜನಾಂಗದ ಸಿರಿವಂತರು, ದಾನಿಗಳು, ವಿದ್ಯಾವಂತರು ಆದ ಸಿದ್ಧಾಪುರದ ಶ್ರೀ ಪಟೇಲ್ ಪುಟ್ಟಣ್ಣ, ಪ್ಲೀಡರ್ ಕೆಂಪಣ್ಣ, ಶ್ರೀ ಎಂ.ಎಲ್. ಶ್ಯಾಮಗೌಡ, ಶ್ರೀ ಸಿ. ಲಕ್ಷ್ಮಣಗೌಡ ಹಾಗೂ ಅವತಾರ ಪುರುಷ ಶ್ರೀ ಕೆ.ಹೆಚ್. ರಾಮಯ್ಯ ಇವರೆಲ್ಲರೂ 1906 ಏಪ್ರಿಲ್ 8 ರಂದು ಶ್ರೀ ಎಂ. ಸುಬ್ಬಯ್ಯನವರ ತೋಟದಲ್ಲಿ ಸಭೆ ಸೇರಿ ಒಕ್ಕಲಿಗರ ಸಂಘದ ಸ್ಥಾಪನೆಯ ಆಶಯವನ್ನು ಹಂಚಿಕೊಂಡರು.

**ಪೂರ್ವಭಾವಿ ಸಭೆ :-**

ಸಂಘ ಸ್ಥಾಪನೆಯ ಬಗ್ಗೆ ಪೂರ್ವಭಾವಿಯಾದ ಮಾತುಕತೆ ನಡೆಸಲು '1906ರ ಏಪ್ರಿಲ್ 15 ರಂದು' ಕೋಟೆ ಪಕ್ಕದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಧರ್ಮಸಂಸ್ಥೆಯಲ್ಲಿ ಪ್ರಥಮ ಸಭೆಯ ಪ್ರಥಮ ಕಾರ್ಯಕಾರಿ ಸಮಿತಿ ರಚನೆಗೊಂಡು ಪ್ಲೀಡರ್ ಕೆಂಪಣ್ಣನವರು ಅಧ್ಯಕ್ಷರಾಗಿ ಶ್ರೀ ಕೆ.ಹೆಚ್. ರಾಮಯ್ಯನವರು ಪ್ರಧಾನಕಾರ್ಯದರ್ಶಿಗಳಾಗಿ ನೇಮಕಗೊಂಡರು. ಇದು ಒಕ್ಕಲಿಗ ಸಂಘದ ನವೋದಯಕ್ಕೆ ಕಾರಣವಾಯಿತು.

1906ರ ಏಪ್ರಿಲ್ 29 ರಂದು ದೊಡ್ಡಣ್ಣಶೆಟ್ಟರ ಧರ್ಮಶಾಲೆಯಲ್ಲಿ ಸಭೆ ಸೇರಿದ ಶ್ರೀ ಬ್ಯಾರಿಸ್ಟರ್ ಬಿ. ನಾಗಪ್ಪ, ಉರಿಗದ ಶ್ರೀ ಟಿ. ಬೈಯಣ್ಣ, ಶ್ರೀ ಬಿ.ಎನ್. ಚೆನ್ನಿಗಪ್ಪ, ಶ್ರೀ ಎಂ. ಸುಬ್ಬಯ್ಯ, ಶ್ರೀ ಬಿ. ಕೆಂಪಣ್ಣ, ಶ್ರೀ ಎಂ.ಎಲ್. ಶ್ಯಾಮಗೌಡ, ಶ್ರೀ ಎನ್. ಪುಟ್ಟಣ್ಣ, ಶ್ರೀ ಸಿ. ಲಕ್ಷ್ಮಣಗೌಡ ಮತ್ತು ಶ್ರೀ ಕೆ.ಹೆಚ್. ರಾಮಯ್ಯ ರವರುಗಳು ಸಂಘದ ಶ್ರೇಯೋಭಿವೃದ್ಧಿ ಬಗ್ಗೆ ಚರ್ಚಿಸಿ, 1906 ರ ಅಕ್ಟೋಬರ್ ತಿಂಗಳಲ್ಲಿ ಮಹಾಸಭೆ ನಡೆಸಲು ತೀರ್ಮಾನಿಸಿದರು.

1906 ರಲ್ಲಿ ಮೈಸೂರಿನ ದಿವಾನರಾಗಿದ್ದ ಶ್ರೀ ಪಿ.ವಿ. ಮಾಧವರಾಯರನ್ನು ಭೇಟಿ ಮಾಡಿದ ಬ್ಯಾರಿಸ್ಟರ್ ನಾಗಪ್ಪನವರು, 1906ರ ಅಕ್ಟೋಬರ್ 7, 8, 9 ರಂದು ಜರುಗುವ ಒಕ್ಕಲಿಗರ ಸಂಘದ ಮೊದಲ ಮಹಾಸಭೆಯ ಪ್ರಾರಂಭೋತ್ಸವವನ್ನು ತಾವು ನಡೆಸಿಕೊಡಬೇಕೆಂದು, ವಿದ್ಯಾಭ್ಯಾಸಕ್ಕೆ ಬರುವಂತಹ ರೈತಾಪಿ ಬಡ ವಿದ್ಯಾರ್ಥಿಗಳ ವಸತಿ ಸೌಕರ್ಯ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ಕಟ್ಟಡ ನಿರ್ಮಿಸಿಕೊಳ್ಳಲು ಜಮೀನಿನ ಅಗತ್ಯವಿದೆ. ಅದನ್ನು ತಾವು ದಯಮಾಡಿ ಕೊಡಿಸಿಕೊಡಬೇಕೆಂದು ವಿನಂತಿಸಿಕೊಂಡರು.

**ಒಕ್ಕಲಿಗರ ಸಂಘದ ಮೊದಲ ಮಹಾಸಭೆ :-**

ಒಕ್ಕಲಿಗರ ಸಂಘದ ಮೊದಲ ಮಹಾಸಭೆ 1906 ಅಕ್ಟೋಬರ್ 7, 8, 9 ರಂದು ಶ್ರೀ ಬಿ.ಎಸ್. ಮಾರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ದಿವಾನರಾದ ಶ್ರೀ ಪಿ.ವಿ. ಮಾಧವರಾಯರು ಮಹಾಸಭೆಯನ್ನು ಉದ್ಘಾಟಿಸಿದರು. ಸಭೆಗೆ ಮೈಸೂರು ಸಂಸ್ಥಾನದ ದಶದಿಕ್ಕುಗಳಿಂದ ಜನಸಾಗರ ಹರಿದು ಬಂದಿತ್ತು. ಒಕ್ಕಲಿಗ ಎಂಬ ಪದ ಅಭಿಮಾನವನ್ನು ತುಂಬಿ ಒಕ್ಕಲಿಗರ ಎದೆಯುಬ್ಬಿಸಿ ನಡೆಯುವಂತೆ ಈ ಸಭೆ ಪ್ರಚೋದಿಸಿತು. ಈ ಸಭೆಯ ಅಧ್ಯಕ್ಷರಾದ ಶ್ರೀ ಬಿ.ಎಸ್. ಮಾರಪ್ಪ ಹಾಗು

ಅವರ ಸಹೋದರರಾದ ಶ್ರೀ ಬಿ.ಎಸ್. ಮುನಿಸ್ವಾಮಪ್ಪನವರು 30,000 ರೂಪಾಯಿ ವೆಚ್ಚದಲ್ಲಿ ಸಭಾಭವನ ಹಾಗು ವಿದ್ಯಾರ್ಥಿನಿಲಯವನ್ನು ನಿರ್ಮಿಸಿಕೊಡಲು ಸಮ್ಮತಿಸಿದರು. ಬ್ಯಾರಿಸ್ಟರ್ ಬಿ. ನಾಗಪ್ಪ ಮತ್ತು ಶ್ರೀ ಕೆ.ಹೆಚ್. ರಾಮಯ್ಯನವರ ಅವಿರತ ಶ್ರಮದ ಫಲವಾಗಿ ಪ್ರಥಮ ಮಹಾಸಭೆ ಅತ್ಯಂತ ಯಶಸ್ವಿಯಾಗಿ ಮುಕ್ತಾಯ ಗೊಂಡಿತು.

**ನಾಲ್ವಡಿ ಕೃಷ್ಣರಾಜ ಒಡೆಯರ ಅನುಗ್ರಹ**

ಒಕ್ಕಲಿಗರ ಸಂಘದ ಚಟುವಟಿಕೆ ನಡೆಸಲು ಸ್ವಂತ ಜಮೀನೆಂಬುದೆ ಇರಲಿಲ್ಲ. ಸಂಘದ ಶೈಕ್ಷಣಿಕ ಚಟುವಟಿಕೆಗಳಿಗೆ ಕಟ್ಟಡ ನಿರ್ಮಿಸಿಕೊಳ್ಳಲು ಮೈಸೂರು ಸರ್ಕಾರ ಸರ್ಕಾರಿ ಜಮೀನನ್ನು ಮಂಜೂರು ಮಾಡಬೇಕೆಂದು ದಿವಾನ್ ಮಾಧವರಾಯರ ಬಳಿ ನಿವೇದನೆ ಮಾಡಲಾಯಿತು. ದಿವಾನರು, ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ರವರ ಮನವೊಲಿಸಿದರು. ಅದಕ್ಕೆ ಸ್ಪಂದಿಸಿ ಒಪ್ಪಿಗೆ ನೀಡಿ ಕೃಷ್ಣರಾಜ ಒಡೆಯರವರು ಬಹು ಸಂತೋಷದಿಂದ 12 ಎಕರೆ 13 ಗುಂಟೆ ಜಮೀನನ್ನು ಮಂಜೂರು ಮಾಡಿರುತ್ತಾರೆ. ಈ ಜಾಗವು ಇಂದಿನ ದಕ್ಷಿಣದ ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಕಾಲೇಜಿನಿಂದ ಉತ್ತರದ ಕುವೆಂಪು ಕಲಾಕ್ಷೇತ್ರ ಹಾಗೂ ಪೂರ್ವದ ಕೊರಚರಪಾಳ್ಯ (ಪಾರ್ವತಿಪುರ) ದಿಂದ ಪಶ್ಚಿಮದ ಕೆ.ಆರ್.ರಸ್ತೆ, ವರೆಗಿನ ವಿಸ್ತೀರ್ಣವನ್ನೊಳಗೊಂಡಿರುತ್ತದೆ.

**ಒಕ್ಕಲಿಗರ ಸಂಘದ ಅಂಗರಚನೆ**

1907 ರ ಸೆಪ್ಟಂಬರ್ 9 ರಂದು ಒಕ್ಕಲಿಗರ ಸಂಘದ ಪದಾಧಿಕಾರಿಗಳು ಸಭೆಸೇರಿ ಆಡಳಿತಾತ್ಮಕ ಉದ್ದೇಶಗಳಿಗಾಗಿ ಸಂಘದ ಧ್ಯೆಯೋದ್ಧೇಶಗಳು ಹಾಗೂ ಸೂಕ್ತ ವಿಧಿ ನಿಯಮಗಳನ್ನು ರಚಿಸಿದರು. ಅವರ ಪ್ರಕಾರ ಸಂಘದಲ್ಲಿ ದ್ವಿಮುಖ ಆಡಳಿತ ಪದ್ಧತಿಯಾದ

1) ಎಕ್ಸಿಕ್ಯೂಟಿವ್ ಕೌನ್ಸಿಲ್ (ಕಾರ್ಯಕಾರಿ ಸಮಿತಿ)
2) ಜನರಲ್ ಕೌನ್ಸಿಲ್ (ಸಾಮಾನ್ಯ ಸಮಿತಿ) ಗಳು ಅಸ್ಥಿತ್ವಕ್ಕೆ ಬಂದವು.

1935 ರವರೆಗೆ ದ್ವಿಮುಖ ಆಡಳಿತ ಪದ್ಧತಿ ಮುಂದುವರಿದಿತ್ತು.

**1907 ರಿಂದ – 1909 ರವರೆಗಿನ ಆಡಳಿತ ಮಂಡಳಿ ಎಕ್ಸಿಕ್ಯೂಟಿವ್ ಕೌನ್ಸಿಲ್ (ಕಾರ್ಯಕಾರಿ ಸಮಿತಿ)**

1) ಉರಿಗದ ಶ್ರೀ ಟಿ. ಬೈಯಣ್ಣನವರು - ಅಧ್ಯಕ್ಷರು
2) ಬ್ಯಾರಿಸ್ಟರ್ ಬಿ. ನಾಗಪ್ಪ - ಉಪಾಧ್ಯಕ್ಷರು
3) ಶ್ರೀ ಕೆ.ಹೆಚ್. ರಾಮಯ್ಯ - ಪ್ರಧಾನ ಕಾರ್ಯದರ್ಶಿ
4) ಶ್ರೀ ಬಿ. ಪುಟ್ಟಯ್ಯ - ಉಪಕಾರ್ಯದರ್ಶಿ
5) ಶ್ರೀ ಎಂ.ಎಲ್. ಶ್ಯಾಮಗೌಡ - ಕೋಶಾಧಿಕಾರಿ

**ಜನರಲ್ ಕೌನ್ಸಿಲ್ (ಸಾಮಾನ್ಯ ಸಮಿತಿ)**

1) ಶ್ರೀ ಬಿ.ಎಸ್. ಮಾರಪ್ಪನವರು - ಅಧ್ಯಕ್ಷರು
2) ಶ್ರೀ ಎಂ. ಸುಬ್ಬಯ್ಯ - ಪ್ರಧಾನ ಕಾರ್ಯದರ್ಶಿ
3) ಶ್ರೀ ಎಂ.ಎಲ್. ಶ್ಯಾಮಗೌಡ - ಕೋಶಾಧಿಕಾರಿ

**ಒಕ್ಕಲಿಗರ ಪತ್ರಿಕೆ**

ಜನಾಂಗದ ಜನರನ್ನು ಜಾಗೃತಿಗೊಳಿಸಿ ಆ ಮೂಲಕ ಜನಾಂಗದ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಒಂದು ಪತ್ರಿಕೆ ತರಲು ನಿರ್ಧರಿಸಲಾಯಿತು. ಸಂಘದ ಸಂಸ್ಥಾಪಕರುಗಳು ಅದಕ್ಕೆ ಒಕ್ಕಲಿಗರ ಪತ್ರಿಕೆ ಎಂದು ಹೆಸರಿಟ್ಟರು. ಅದರ ಪ್ರಥಮ

ಸಂಚಿಕೆ 1907 ಮಾರ್ಚ್ 15 ರಂದು ಬಿಡುಗಡೆಯಾಯಿತು. ಶ್ರೀ ಬಿ. ಪುಟ್ಟಯ್ಯನವರು ಪತ್ರಿಕೆಯ ಪ್ರಧಾನ ಸಂಪಾದಕರಾಗಿ, ಮುದ್ರಕರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದರು.

**ಒಕ್ಕಲಿಗರ ಸಂಘದ ಎರಡನೇ ಮಹಾಸಭೆ**

ಒಕ್ಕಲಿಗರ ಸಂಘದ ಎರಡನೇ ಮಹಾಸಭೆಯ 1907 ರ ಅಕ್ಟೋಬರ್ 17 ರಂದು ಮೈಸೂರಿನಲ್ಲಿ ಜರುಗಿತು. ಬ್ಯಾರಿಸ್ಟರ್ ಬಿ. ನಾಗಪ್ಪನವರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಸಂಸ್ಥಾನದ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಮಹಾಸಭೆಯನ್ನು ಉದ್ಘಾಟಿಸಿದರು. ಹಾಗು ಸಂಘದ ಘನ ಪೋಷಕರಾಗಲು ಕೃಪೆಮಾಡಿ ಒಪ್ಪಿದರು.

**ಒಕ್ಕಲಿಗರ ಸಂಘದ ಮೂರನೇಯ ಸಭೆ**

ಒಕ್ಕಲಿಗರ ಸಂಘದ ಮೂರನೆಯ ಮಹಾಸಭೆಯು 1908 ಏಪ್ರಿಲ್ 28 ರಂದು ಬೆಂಗಳೂರಿನಲ್ಲಿ ನಡೆಯಿತು. ದಿವಾನ್ ಶ್ರೀ ಪಿ.ವಿ. ಮಾಧವರಾಯರು ಮತ್ತೆ ಅಗ್ರಪಾತ್ರ ವಹಿಸಿ ಆರಂಭೋತ್ಸವವನ್ನು ನೆರವೇರಿಸಿದರು. ನೀಲಗಿರಿಯ ಪ್ರಸಿದ್ಧ ತೋಟಗಾರರಾದ ಶ್ರೀ ಸಿ. ರಂಗೇಗೌಡರು ಅಧ್ಯಕ್ಷತೆ ವಹಿಸಿದ್ದರು.

**ಒಕ್ಕಲಿಗರ ವಿದ್ಯಾರ್ಥಿನಿಲಯ**

ಉರಿಗದ ಟಿ. ಬೈಯಣ್ಣನವರು ಅರಳೇಪೇಟೆಯಲ್ಲಿರುವ ತಮ್ಮ ಇನ್ನೊಂದು ಮನೆಯನ್ನು ವಿದ್ಯಾರ್ಥಿ ನಿಲಯಕ್ಕೆ ಬಿಟ್ಟುಕೊಟ್ಟರು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿ ಕೆಲವು ಕಾಲ ಚಾಮರಾಜಪೇಟೆಯ ಮಂಡಿ ವರ್ತಕರಾದ ಶ್ರೀ ಎಸ್.ಕೆ. ನರಸಿಂಹಯ್ಯನವರ ಸ್ವಗೃಹದಲ್ಲಿ ಸ್ಥಳಾವಕಾಶ ಕಲ್ಪಿಸಿರುತ್ತಾರೆ.

**ಒಕ್ಕಲಿಗರ ಸಂಘಕ್ಕೆ ಜಮೀನು ಮಂಜೂರು ಆದೇಶ**

ಒಕ್ಕಲಿಗರ ಸಂಘದ ಸಂಸ್ಥಾಪಕರಾದ ಶ್ರೀ ಕೆ.ಹೆಚ್. ರಾಮಯ್ಯ ಹಾಗೂ ಬ್ಯಾರಿಸ್ಟರ್ ಬಿ. ನಾಗಪ್ಪನವರು ಅಂದಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜರು ಹಾಗೂ ದಿವಾನರ ಮೇಲೆ ಇಟ್ಟಿದ್ದ ಗೌರವ ಸ್ವಾಮಿನಿಷ್ಠೆ ಹಾಗೂ ರಾಜಭಕ್ತೆಯಿಂದ ಸಂತುಷ್ಟಗೊಂಡ ಮಹಾರಾಜ ನಾಲ್ವಡಿ ಕೃಷ್ಣರಾಜರು ಸಂಘಕ್ಕೆ ಅವಶ್ಯಕವಾಗಿ ಬೇಕಾಗಿರುವ ಜಮೀನನ್ನು ಸರ್ಕಾರದವತಿಯಿಂದ ನೀಡಲು ಸಮ್ಮತಿಸಿದರು. ಅವತಾರ ಪುರುಷ ಶ್ರೀ ಕೆ.ಹೆಚ್. ರಾಮಯ್ಯನವರ ಅವಿರತ ಶ್ರಮ, ಸಂಘಕ್ಕೆ ಸರ್ಕಾರಿ ಜಮೀನು ಸಿಗಲು ಸಹಕಾರಿಯಾಯಿತು. ದಿವಾನ್ ಮಾಧವರಾಯರ ಆದೇಶದಂತೆ ಅಂದಿನ ಬೆಂಗಳೂರು ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಜಮೀನಿನ ಕರಡು ಪ್ರತಿ ಸಿದ್ಧಪಡಿಸಿದರು. ಮಹಾರಾಜ ನಾಲ್ವಡಿ ಕೃಷ್ಣರಾಜರು 12 ಎಕರೆ 16 ಗುಂಟೆ ಜಮೀನನ್ನು (ಆದೇಶ ಸಂಖ್ಯೆ:94347/ಎ01/3879-08-02 ದಿನಾಂಕ: 23-09-1909) ಒಕ್ಕಲಿಗರ ಸಂಘಕ್ಕೆ ಕೊಡುಗೆಯಾಗಿ ನೀಡಿದರು.

**ಸಭಾಭವನ ಮುದ್ರಣಾಲಯ ಹಾಗು ಅಡಿಗೆಮನೆ ಕಟ್ಟಡಗಳ ಸ್ಥಾಪನೆ**

ಶ್ರೀ ಬಿ.ಎಸ್. ಮಾರಪ್ಪನವರು ನೀಡಿದ 30,000 ರೂಪಾಯಿಗಳು ಸರ್ಕಾರದಿಂದ ದೊರೆತ ಮ್ಯಾಚಿಂಗ್ ಗ್ರ್ಯಾಂಟ್, ಬ್ಯಾರಿಸ್ಟರ್ ನಾಗಪ್ಪನವರು ಧರ್ಮಾರ್ಥವಾಗಿ ನೀಡಿದ 5000 ರೂಪಾಯಿಗಳಿಂದಾಗಿ ಸಭಾಭವನ, ಮುದ್ರಣಾಲಯ ಹಾಗು ಅಡಿಗೆ ಮನೆ ಕಟ್ಟಡಗಳು ಸುಸಜ್ಜಿತವಾಗಿ ನಿರ್ಮಾಣಗೊಂಡವು.

**ಸರ್ಕಾರಿ ಆಜ್ಞೆ**

1934 ರಲ್ಲಿ ಸರ್ಕಾರಿ ಹುದ್ದೆಗಳಲ್ಲಿರುವವರು ನೇರವಾಗಿ ಖಾಸಗಿ ಸಂಘ ಸಂಸ್ಥೆಗಳ ಕಾರ್ಯನಿರ್ವಾಹಕ ಸಮಿತಿಗಳಲ್ಲಿ ಅಧಿಕಾರ ಸ್ಥಾನ ವಹಿಸಬಾರದೆಂದು ಸರ್ಕಾರದವರು ಒಂದು ಆಜ್ಞೆ ಹೊರಡಿಸಿದರು. ಅದರ ಪರಿಣಾಮವಾಗಿ ಒಕ್ಕಲಿಗರ ಸಂಘಕ್ಕಾಗಿ ಅಹರ್ನಿಸಿ ದುಡಿದಿದ್ದ ಬ್ಯಾರಿಸ್ಟರ್ ಬಿ. ನಾಗಪ್ಪನವರು ಅಧ್ಯಕ್ಷ ಸ್ಥಾನವನ್ನು ಬಿಡಬೇಕಾಯಿತು.

ಹಾಗೆಯೇ ಶ್ರೀ ಕೆ.ಹೆಚ್. ರಾಮಯ್ಯನವರು ಹಾಗೂ ಶ್ರೀ ಬಿ. ಪುಟ್ಟಯ್ಯನವರು ತಮ್ಮ ಪದಾಧಿಕಾರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಶ್ರೀ ಕೆ.ಹೆಚ್. ರಾಮಯ್ಯನವರು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿಯೂ ಶ್ರೀ ಪುಟ್ಟಯ್ಯನವರು ಸರ್ಕಾರಿ ಮುದ್ರಣಾಲಯದ ಸಹಾಯಕ ಅಧೀಕ್ಷಕರಾಗಿ ಅಧಿಕಾರ ವಹಿಸಿಕೊಂಡರು.

**ಒಕ್ಕಲಿಗರ ಸಂಘದ ಸುವರ್ಣ ಮಹೋತ್ಸವ**

ಶ್ರೀ ಎಂ.ಸಿ. ಲಿಂಗೇಗೌಡರು ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಆಯ್ಕೆಗೊಂಡ ಮೇಲೆ ಒಕ್ಕಲಿಗರ ಸಂಘದ ಸುವರ್ಣ ಮಹೋತ್ಸವವನ್ನು ಆಚರಿಸಲು ಸಿದ್ಧತೆ ನಡೆಸಲಾಯಿತು. ಇದರ ಪರಿಣಾಮವಾಗಿ 1961ರ ಸೆಪ್ಟಂಬರ್ 20, 21, 22 ಮತ್ತು 23 ರಂದು ಸುಮಾರು 6 ಲಕ್ಷ ರೂಗಳ ವೆಚ್ಚದಲ್ಲಿ ಸಂಘದ ಸುವರ್ಣ ಮಹೋತ್ಸವ ಜರುಗಿತು. ಮೈಸೂರು ರಾಜ್ಯದ ರಾಜ್ಯಪಾಲರಾಗಿದ್ದ ಶ್ರೀಮಾನ್ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಸಮ್ಮೇಳವನ್ನು ಉದ್ಘಾಟಿಸಿದರು. ಮಹಾರಾಣಿ ರಾಜಕುಮಾರಿ ಗಾಯತ್ರಿದೇವಿಯವರು ಹಾಗು ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಬಿ.ಡಿ. ಜತ್ತಿಯವರು ಆಗಮಿಸಿದರು. ನಾಲ್ಕು ದಿನಗಳ ಸಮ್ಮೇಳನದ ಜೊತೆಗೆ ದಕ್ಷಿಣಭಾರತ ಒಕ್ಕಲಿಗರ ಸಮ್ಮೇಳನ ಹಾಗು ಮಹಿಳಾ ಸಮ್ಮೇಳನಗಳು ನಡೆದವು. ಈ ಸಮ್ಮೇಳನದಲ್ಲಿ ಮದ್ದೂರಿನ ಶ್ರೀ ಹೆಚ್.ಕೆ. ವೀರಣ್ಣಗೌಡರ ಪಾತ್ರ ಹಿರಿದಾದುದು.

**ಶ್ರೀಗಂಧದಕಾವಲು ಪ್ರದೇಶ**

ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿಯ ಶ್ರೀಗಂಧದಕಾವಲು ಗ್ರಾಮಕ್ಕೆ ಸೇರಿದ 45 ಎಕರೆ ಭೂಮಿಯನ್ನು ಸರ್ಕಾರ 02/01/1967 ರಲ್ಲಿ ಸಂಘಕ್ಕೆ ನೀಡಿತು. ಈ ಜಮೀನು ಪಡೆಯಲು ಶ್ರೀ ಎಂ.ವಿ. ಕೃಷ್ಣಪ್ಪನವರ ಪ್ರಯತ್ನ ನಿರಂತರವಾಗಿತ್ತು.

**ಮಹೋದಯದ ಕಾಲ**

1972 ರ ನಂತರ ಒಕ್ಕಲಿಗರ ಸಂಘದ ಅಭಿವೃದ್ಧಿ ತ್ವರಿತ ಗತಿಯಲ್ಲಿ ನಡೆಯತೊಡಗಿತು. 06/02/1972 ರಲ್ಲಿ ಸಂಘದ ಅಧ್ಯಕ್ಷರಾಗಿ ಶ್ರೀ ಕೆ.ಹೆಚ್. ರಾಮಯ್ಯನವರ ಜೇಷ್ಠ ಪುತ್ರರಾದ ಶ್ರೀ ಕೆ.ಆರ್. ಮರುದೇವೇಗೌಡ ಆಯ್ಕೆಗೊಂಡರು. ಇವರ 7 ವರ್ಷಗಳ ಅಧಿಕಾರವಧಿಯಲ್ಲಿ ಸಂಘದ ಚರಿತ್ರೆಯಲ್ಲಿ ಹಿಂದೆಂದೂ ನಡೆಯದಂತಹ ಮಹತ್ಕಾರ್ಯಗಳು ನಡೆದಿವೆ.

**ಒಕ್ಕಲಿಗರ ಸಂಘದ ವಜ್ರ ಮಹೋತ್ಸವ**

ಒಕ್ಕಲಿಗರ ಸಂಘದ ವಜ್ರ ಮಹೋತ್ಸವ 1982 ರಲ್ಲಿ ಅತ್ಯಂತ ವೈಶಿಷ್ಠಪೂರ್ಣವಾಗಿ ಬೆಂಗಳೂರಿನಲ್ಲಿ ಜರುಗಿತು. ಅಂದಿನ ಅಧ್ಯಕ್ಷರಾದ ಡಾ: ಎಂ.ಹೆಚ್. ಮರೀಗೌಡರು ಮಾಡಿದ ಭಾಷಣ ಜನಾಂಗದ ಏಳಿಗೆಗೆ ಮಾಡಬೇಕಾದ ಕಾರ್ಯಗಳನ್ನು ನೆನಪಿಸಿತು. ವಜ್ರ ಮಹೋತ್ಸವದ ನೆನಪಿಗಾಗಿ ಕಾರ್ಪೊರೇಷನ್ ಬಳಿಯಲ್ಲಿ ನಿರ್ಮಿಸಿರುವ ವಜ್ರ ಮಹೋತ್ಸವ ವಾಣಿಜ್ಯ ಸಂಕೀರ್ಣ "ಒಕ್ಕಲಿಗರ ಭವನ" ಸಾಕ್ಷಿಯಾಗಿ ನಿಂತಿದೆ.

# ರಾಜ್ಯ ಒಕ್ಕಲಿಗರ ಸಂಘ, ಬೆಂಗಳೂರು–560 004.

## 1906 ರಿಂದ 2019 ರ ಅವಧಿಯಲ್ಲಿ ಕಾರ್ಯನಿರ್ವಹಿಸಿರುವ ಅಧ್ಯಕ್ಷರುಗಳು

| ಕ್ರಮ ಸಂಖ್ಯೆ | ಶ್ರೀಯುತರುಗಳು | ಇಂದ–ವರೆಗೆ |
|---|---|---|
| 1. | ಉರಿಗದ ಟಿ. ಬೈಯಣ್ಣನವರು | 1907–1909 |
| 2. | ಬಿ.ಎಸ್. ಮಾರಪ್ಪನವರು | 1909–1919 |
| 3. | ಬಿ. ನಾಗಪ್ಪನವರು | 1919–1924 |
| 4. | ಬಿ. ಕೆಂಪಣ್ಣನವರು | 1924–1927 |
| 5. | ಬಿ. ನಾಗಪ್ಪನವರು | 1927–1934 |
| 6. | ರಾವ್ ಸಾಹೇಬ್ ಎಚ್. ಚನ್ನಯ್ಯನವರು | 1934–1935 |
| 7. | ಸಿ. ಲಕ್ಷ್ಮಣಗೌಡರು | 1936–1943 |
| 8. | ಬಿ. ಟಿ. ರಾಮಯ್ಯನವರು | 1943–1947 |
| 9. | ಎಸ್. ವೆಂಕಟಪ್ಪನವರು | 1947–1949 |
| 10. | ಬಿ.ಎನ್. ವಿಜಯದೇವ್ ರವರು | 1949–1958 |
| 11. | ಎಂ.ಸಿ. ಲಿಂಗೇಗೌಡರು | 1958–1963 |
| 12. | ಹೆಚ್.ಕೆ. ವೀರಣ್ಣಗೌಡರು | 1963–1972 |
| 13. | ಕೆ.ಆರ್. ಮರುದೇವೇಗೌಡರು | 1972–1979 |
| 14. | ಡಾ॥ ಎಂ.ಎಚ್. ಮರೀಗೌಡರು | 1979–1984 |
| 15. | ಡಾ॥ ಕೆ. ಎಸ್ . ರಾಮೇಗೌಡರು | 1984–1987 |
| 16. | ಡಾ॥ ಎಂ.ಎಚ್. ಮರೀಗೌಡರು | 1987–1990 |
| 17. | ಡಾ॥ ಎಂ.ಎಚ್. ಮರೀಗೌಡರು | 1990–1992 |
| 18. | ಬಿ.ಟಿ. ಪಾರ್ಥಸಾರಥಿಯವರು (ಹಂಗಾಮಿ) | 1990–1992 |
| 19. | ಪ್ರೊ॥ ಕೆ. ವೆಂಕಟಗಿರೀಗೌಡರು | 1992 |
| 20. | ಗುತ್ತಲಗೌಡರು (ಕಾರ್ಯಾಧ್ಯಕ್ಷರು) | 1992 |
| 21. | ಗುತ್ತಲಗೌಡರು | 1992–93 |
| 22. | ಪ್ರೊ॥ ಕೆ. ವೆಂಕಟಗಿರೀಗೌಡರು | 1993 |
| 23. | ಟಿ. ಪಿಳ್ಳಭೈರಪ್ಪನವರು (ಕಾರ್ಯನಿರ್ವಾಹಕ ಅಧ್ಯಕ್ಷರು) | 1993 |
| 24. | ಎ. ಅನಂತಪ್ಪನವರು | 1993 |
| 25. | ಗುತ್ತಲಗೌಡರು | 1994–1996 |
| 26. | ಎ. ಅನಂತಪ್ಪನವರು | 1994–1996 |
| 27. | ಗುತ್ತಲಗೌಡರು | 1996 |
| 28. | ಎಂ. ಶ್ರೀನಿವಾಸ್‌ರವರು ((ಗೌರವಾಧ್ಯಕ್ಷರು) | 1996 |
| 29. | ಹೆಚ್.ಟಿ. ಕೃಷ್ಣೇಗೌಡರು (ಹಂಗಾಮಿ ಅಧ್ಯಕ್ಷರು) | 1996 |
| 30. | ಡಾ॥ ಸಿ. ವಿಠಲ್‌ರವರು | 1996–2000 |
| 31. | ಶ್ರೀಮತಿ ಜಯಲಕ್ಷ್ಮಿ ಸಿದ್ದಯ್ಯನವರು (ಗೌರವಾಧ್ಯಕ್ಷರು) | 1998–2000 |

| | | |
|---|---|---|
| **32.** | **ಶ್ರೀ ಪಿ. ರವಿಕುಮಾರ್, ಬಾ.ಅ.ಸೇ (ಆಡಳಿತಾಧಿಕಾರಿ)** | **28–1–2000**<br>**10–4–2000** |
| 33. | ಡಾ॥ ಸಿ. ವಿಠಲ್‌ರವರು | 2000 |
| 34. | ಬಿ. ಗಂಗಾಧರ್‌ರವರು (ಪ್ರಭಾರ ಅಧ್ಯಕ್ಷರು) | 2000 |
| 35. | ಡಾ॥ ಸಿ. ವಿಠಲ್‌ರವರು | 2000–2002 |
| 36. | ಡಿ.ಬಿ. ಬಸವೇಗೌಡರು. | 2002 |
| 37. | ಎಂ. ಶ್ರೀನಿವಾಸ್‌ರವರು (ಕಾರ್ಯಾಧ್ಯಕ್ಷರು) | 2002 |
| 38. | ಡಾ॥ ಸಿ. ವಿಠಲ್‌ರವರು | 2002–03 |
| 39. | ಪ್ರೊ॥ ಕೆ. ವೆಂಕಟಗಿರೀಗೌಡರು | 2003–04 |
| 40. | ಬಿ.ಎನ್. ಗೋಪಾಲಗೌಡರು (ಕಾರ್ಯಾಧ್ಯಕ್ಷರು) | 2003–04 |
| 41. | ಎಸ್. ಟಿ. ನಾರಾಯಣಗೌಡರು | 2004 |
| 42. | ಡಾ॥ ಸಿ. ವಿಠಲ್‌ರವರು | 2004–05 |
| 43. | ಎಸ್.ಟಿ. ನಾರಾಯಣಗೌಡರು (ಕಾರ್ಯಾಧ್ಯಕ್ಷರು) | 2004–05 |
| 44. | ಹೆಚ್.ಟಿ. ಕೃಷ್ಣೇಗೌಡರು (ಪ್ರಭಾರ) | 2005 |
| 45. | ಡಾ॥ ಸಿ. ವಿಠಲ್‌ರವರು | 2005–08 |
| 46. | ಬಿ.ಎನ್. ಗೋಪಾಲಗೌಡರು (ಕಾರ್ಯಾಧ್ಯಕ್ಷರು) | 2005 |
| 47. | ಎಸ್.ಟಿ. ನಾರಾಯಣಗೌಡರು (ಕಾರ್ಯಾಧ್ಯಕ್ಷರು) | 2005–08 |
| 48. | ಬಿ. ಕೆಂಚಪ್ಪಗೌಡರು | 2008–13 |
| 49. | ಎಂ.ಎ. ಆನಂಧರವರು (ಕಾರ್ಯಾಧ್ಯಕ್ಷರು) | 2008–12 |
| 50. | ಸಿ. ಮಂಜುನಾಥ್‌ರವರು (ಕಾರ್ಯಾಧ್ಯಕ್ಷರು) | 2012–13 |
| 51. | ಡಾ॥ ಅಪ್ಪಾಜಿಗೌಡರು | 2014–17 |
| 52. | ಎಂ.ಎ. ಆನಂಧರವರು (ಕಾರ್ಯಾಧ್ಯಕ್ಷರು) | 2013– |
| 53. | ಶ್ರೀ ಡಿ.ಎನ್. ಬೆಟ್ಟೇಗೌಡರು | 2017–ಆಗಸ್ಟ್ 2018 |
| 54. | ಎಂ.ಎ. ಆನಂಧರವರು (ಕಾರ್ಯಾಧ್ಯಕ್ಷರು) | 2017–2017 |
| 55. | ಬಿ. ಮುನೇಗೌಡರು (ಕಾರ್ಯಾಧ್ಯಕ್ಷರು) | 2017– |
| 56. | ಪಿ.ವೆಂಕಟೇಶ್‌ರವರು (ಗೌ॥ ಅಧ್ಯಕ್ಷರು) | 2018– |
| 57. | **ಶ್ರೀ ಹೆಚ್.ಎಸ್. ಅಶೋಕಾನಂದ್, ಐ.ಎ.ಎಸ್. (ನಿವೃತ್ತಿ) ಆಡಳಿತಾಧಿಕಾರಿ** | **ಆಗಸ್ಟ್–2018** ರಿಂದ |

## 1906 ರಿಂದ 2019 ರ ಅವಧಿಯಲ್ಲಿ ಕಾರ್ಯನಿರ್ವಹಿಸಿರುವ ಪ್ರಧಾನ ಕಾರ್ಯದರ್ಶಿಗಳು

| ಕ್ರಮ ಸಂಖ್ಯೆ | ಶ್ರೀಯುತರುಗಳು | ಇಂದ–ವರೆಗೆ |
|---|---|---|
| 1. | ಕೆ.ಎಚ್. ರಾಮಯ್ಯನವರು | 1907–1909 |
| 2. | ಕೆ.ಎಚ್. ರಾಮಯ್ಯನವರು | 1909–1919 |
| 3. | ಎಂ. ಸುಬ್ಬಯ್ಯನವರು | 1919–1924 |
| 4. | ಎಂ.ಎಲ್. ಶ್ಯಾಮಗೌಡರು | 1924–1927 |
| 5. | ಸಿ. ಲಕ್ಷ್ಮಣಗೌಡರು | 1927–1934 |
| 6. | ಸಿ. ಲಕ್ಷ್ಮಣಗೌಡರು | 1934–1935 |
| 7. | ಟಿ.ಆರ್. ನರಸಿಂಹಯ್ಯನವರು | 1936–1943 |
| 8. | ಎಸ್.ಸಿ. ಮಲ್ಲಯ್ಯನವರು | 1943–1947 |
| 9. | ವೀರಸಂಜೀವೇಗೌಡರು | 1947 |
| 10. | ಕೆ.ಪಿ. ಮುದ್ದಪ್ಪನವರು | 1947–1949 |
| 11. | ಕೆ.ಪಿ. ಮುದ್ದಪ್ಪನವರು | 1949–1958 |
| 12. | ಕೆ.ಪಿ. ಮುದ್ದಪ್ಪನವರು | 1958–1963 |
| 13. | ಎಂ. ಚಿನ್ನಸ್ವಾಮಿಯವರು | 1963–1972 |
| 14. | ಎಂ.ಎಲ್.ಮಲ್ಲಿಕಾರ್ಜುನರವರು | 1972 |
| 15. | ಗುತ್ತಲಗೌಡರು | 1972–1979 |
| 16. | ಗುತ್ತಲಗೌಡರು | 1979–1982 |
| 17. | ಟಿ. ಪಿಳ್ಳಭೈರಪ್ಪನವರು | 1982–87 |
| 18. | ಗುತ್ತಲಗೌಡರು | 1987–1990 |
| 19. | ಬಿ. ಗಂಗಾಧರ್‌ರವರು | 1990–1993 |
| 20. | ಎ. ಮಂಜುರವರು | 1993 |
| 21. | ಪಿ. ವೀರಪ್ಪನವರು | 1993–1994 |
| 22. | ಶ್ರೀಮತಿ ವಾಸಂತಿ ಶಿವಣ್ಣನವರು | 1994–1996 |
| 23. | ಆರ್. ನಂಜುಂಡಗೌಡರು | 1996–1997 |
| 24. | ಟಿ. ಪಿಳ್ಳಭೈರಪ್ಪನವರು | 1997–1998 |
| 25. | ಶ್ರೀಮತಿ ಲಕ್ಷ್ಮೀದೇವಮ್ಮನವರು | 1998 |
| 26. | ಬಿ. ಕೆಂಚಪ್ಪಗೌಡರು | 1998–2000 |
| 27. | ಎಂ. ಶ್ರೀನಿವಾಸ್‌ರವರು | 2000–2002 |
| 28. | ಬಿ. ಕೆಂಚಪ್ಪಗೌಡರು | 2002 |
| 29. | ಎಂ. ಶ್ರೀನಿವಾಸ್‌ರವರು | 2002–03 |
| 30. | ಬಿ. ಕೆಂಚಪ್ಪಗೌಡರು | 2003–05 |
| 31. | ಅ. ದೇವೇಗೌಡರು (ಪ್ರಭಾರ) | 2005 |

| | | |
|---|---|---|
| 32. | ಬಿ. ಕೆಂಚಪ್ಪಗೌಡರು | 2005 |
| 33. | ಹೆಚ್.ಕೆ. ರಮೇಶ್‌ರವರು | 2005–08 |
| 34. | ಡಾ॥ ಕೆ. ಮಹದೇವ್‌ರವರು | 2008–13 |
| 35. | ಪ್ರೊ॥ ಎಂ. ನಾಗರಾಜ್‌ರವರು | 27–2–2014 – 21–9–2014 |
| 36. | ಸಿ.ಎನ್. ಬಾಲಕೃಷ್ಣರವರು | 2014–16 |
| 37. | ಉಲ್ಲೂರು ಸಿ. ಮಂಜುನಾಥ್ | 2016–17 |
| 38. | ಜೆ.ಎಂ. ರಾಮಚಂದ್ರ | 18–01–2017 –3–4–2017 |
| 39. | ಹೆಚ್.ಎಂ.ನಾರಾಯಣಮೂರ್ತಿ (ಹಂಗಾಮಿ) | 3–4–2017 – 19–4–2017 |
| 40. | ಪ್ರೊ॥ ಎಂ. ನಾಗರಾಜ್ | 19–4–2017 – 20–8–2018 |

## 1906 ರಿಂದ 2019 ರ ಅವಧಿಯಲ್ಲಿ ಕಾರ್ಯನಿರ್ವಹಿಸಿರುವ ಕೋಶಾಧಿಕಾರಿಗಳು (ಖಜಾಂಚಿಗಳು)

| ಕ್ರಮ ಸಂಖ್ಯೆ | ಶ್ರೀಯುತ | ಇಂದ–ವರೆಗೆ |
|---|---|---|
| 1. | ಎಂ.ಎಲ್. ಶ್ಯಾಮಗೌಡರು | 1907–1919 |
| 2. | ಬಿ. ಪುಟ್ಟಯ್ಯನವರು | 1919–1924 |
| 3. | ರೈಸ್ ಮಿಲ್ ಪುಟ್ಟಯ್ಯನವರು | 1924–1943 |
| 4. | ಮರಿ ನಂಜುಂಡಯ್ಯನವರು | 1943–1947 |
| 5. | ರೈಸ್ ಮಿಲ್ ಪುಟ್ಟಯ್ಯನವರು | 1947–1949 |
| 6. | ಹೆಚ್. ಎನ್. ಮರಿಸ್ವಾಮಿಯವರು | 1949–1958 |
| 7. | ಜಿ. ಶ್ರೀನಿವಾಸನ್‌ರವರು | |
| 8. | ಬಿ.ಸಿ. ಹನುಮಯ್ಯನವರು | |
| 9. | ಬಿ.ಟಿ. ಕರಂಪಣ್ಣನವರು | |
| 10. | ಎಸ್. ವೀರಪ್ಪನವರು | 1963–1972 |
| 11. | ಜಿ. ಶ್ರೀನಿವಾಸನ್‌ರವರು | |
| 12. | ಶ್ರೀಮತಿ ಇಂದಿರಮ್ಮನವರು | |
| 13. | ಜಿ. ಶ್ರೀನಿವಾಸನ್‌ರವರು | |
| 14. | ಎಂ.ಕೆ. ತಿಮ್ಮೇಶ್ ಪ್ರಭುರವರು | |
| 15. | ಎಂ.ಎಲ್. ಸುಬ್ಬಣ್ಣನವರು | 1972–1979 |
| 16. | ಟಿ.ಎಸ್. ವೆಂಕಪ್ಪಗೌಡರು | 1979–1982 |
| 17. | ಹೋ.ಶ್ರೀನಿವಾಸಯ್ಯನವರು | 1982–1990 |
| 18. | ಬಿ.ಎಸ್. ಸಿದ್ದಲಿಂಗೇಗೌಡರು | 1990–1993 |
| 19. | ಶ್ರೀಮತಿ ವಾಸಂತಿ ಶಿವಣ್ಣನವರು | 1993 |
| 20. | ಬಿ.ಎಸ್. ಸಿದ್ದಲಿಂಗೇಗೌಡರು | 1993–1996 |
| 21. | ಬಿ. ಗಂಗಾಧರ್‌ರವರು | 1996 |
| 22. | ವಿ. ಪಾಪಣ್ಣನವರು | 1996–1997 |
| 23. | ಎಸ್.ಟಿ. ನಾರಾಯಣಗೌಡರು (ಹಂಗಾಮಿ) | 1997 |
| 24. | ವಿ. ಪಾಪಣ್ಣನವರು | 1997 |
| 25. | ಬಿ.ಆರ್. ಅರುಣ್ ರವರು (ಹಂಗಾಮಿ) | 1998 |
| 26. | ಎಂ. ಶ್ರೀನಿವಾಸ್‌ರವರು | 1998–2000 |
| 27. | ಬಿ.ಎನ್. ಗೋಪಾಲಗೌಡರು | 2000–2002 |
| 28. | ಡಾ॥ ಎಂ.ಎಸ್. ಲೋಕೇಶ್‌ಬಾಬುರವರು | 2002 |
| 29. | ಎಂ.ಎ. ಆನಂದರವರು | 2002–2003 |

| | | |
|---|---|---|
| 30. | ಬಿ.ಎಚ್. ಜಗದೀಶ್‌ರವರು | 2003–2004 |
| 31. | ಹೆಚ್.ಕೆ. ರಮೇಶ್‌ರವರು (ರವಿ) | 2004–2005 |
| 32. | ಹೆಚ್.ಟಿ. ಕೃಷ್ಣೇಗೌಡರು (ಪ್ರಭಾರ) | 2005 |
| 33. | ಆಡಿಟರ್ ನಾಗರಾಜ್ ಯಲಚವಾಡಿಯವರು | 2005 |
| 34. | ಎಂ.ಎನ್. ಸದಾಶಿವರೆಡ್ಡಿಯವರು | 2005–2008 |
| 35. | ಎನ್. ರಮೇಶ್‌ರವರು | 2008–2013 |
| 36. | ಡಿ.ಎನ್. ಬೆಟ್ಟೇಗೌಡರು | 2013 |
| 37. | ಉಲ್ಲೂರು ಸಿ ಮಂಜುನಾಥ್‌ರವರು | 2013–16 |
| 38. | ಡಿ.ಸಿ.ಕೆ. ಕಾಳೇಗೌಡ | 2016–17 |
| 39. | ಎನ್. ರಮೇಶ್ | 18–1–2017 – 3–4–2017 |
| 40. | ಡಾ॥ ಬಿ. ಶಿವಲಿಂಗಯ್ಯ | 3–4–2017 – 19–4–2017 |
| 41. | ಡಿ.ಸಿ.ಕೆ. ಕಾಳೇಗೌಡ | 19–4–2017 ರಿಂದ 20–8–2018 |

## 1906 ರಿಂದ 2019 ರ ಅವಧಿಯಲ್ಲಿ ಕಾರ್ಯನಿರ್ವಹಿಸಿರುವ ಉಪಾಧ್ಯಕ್ಷರುಗಳು

| ಕ್ರಮ ಸಂಖ್ಯೆ | ಶ್ರೀಯುತರುಗಳು | ಇಂದ–ವರೆಗೆ |
|---|---|---|
| 1. | ಬಿ. ನಾಗಪ್ಪನವರು | 1907–1909 |
| 2. | ಬಿ.ಎಸ್. ಮುನಿಸ್ವಾಮಪ್ಪನವರು | 1909–1919 |
| 3. | ಬಿ. ಕೆಂಪಣ್ಣನವರು | 1919–1924 |
| 4. | ಎಂ. ಮುನಿಸ್ವಪ್ಪನವರು | 1924–1927 |
| 5. | ಎಂ. ಮುನಿಸ್ವಪ್ಪನವರು | 1927–1934 |
| 6. | ಎಂ. ಮುನಿಸ್ವಪ್ಪನವರು | 1934–1935 |
| 7. | ಎಂ. ಮುನಿಸ್ವಪ್ಪನವರು | 1936–1943 |
| 8. | ಎಂ.ಸಿ. ಲಿಂಗೇಗೌಡರು | 1943–1947 |
| 9. | ಎಂ.ಸಿ. ಮರಿನಂಜುಂಡಯ್ಯನವರು | 1947–1949 |
| 10. | ವೀರಸಂಜೀವೇಗೌಡರು | |
| 11. | ಎಸ್. ತಮ್ಮಯ್ಯಗೌಡರು | |
| 12. | ಜಿ. ಅಪ್ಪಾಜಿಗೌಡರು | 1949–1958 |
| 13. | ವೀರಸಂಜೀವೇಗೌಡರು | |
| 14. | ಬಿ. ಎಚ್. ಸಂಜೀವಪ್ಪನವರು | 1958–1963 |
| 15. | ಎಂ. ನಾರಾಯಣಗೌಡರು | |
| 16. | ಎಲ್. ಬಿ. ಶಿವಲಿಂಗಯ್ಯನವರು | |
| 17. | ವಿ. ವೆಂಕಟಪ್ಪನವರು | 1963–1972 |
| 18. | ಎಲ್.ಬಿ. ಶಿವಲಿಂಗಯ್ಯನವರು | |
| 19. | ಎಂ. ನಾರಾಯಣಗೌಡರು | |
| 20. | ಟಿ.ಕೆ. ತಿಮ್ಮರಾಯಗೌಡರು | 1972–1979 |
| 21. | ಡಾ॥ ಎಂ.ಎಚ್. ಮರೀಗೌಡರು | |
| 22. | ಜೆ. ಲಿಂಗಯ್ಯನವರು | |
| 23. | ಬಿ. ಚನ್ನಭೈರೇಗೌಡರು | |
| 24. | ಜೆ. ಲಿಂಗಯ್ಯನವರು | 1979–1982 |
| 25. | ಬಿ. ಚನ್ನಭೈರೇಗೌಡರು | |
| 26. | ಪ್ರೊ॥ ಟಿ. ರಮೇಶನ್‌ರವರು | |
| 27. | ಕೆ.ಬಿ. ಪಿಳ್ಳಪ್ಪನವರು | 1982–1987 |
| 28. | ಡಾ॥ ಕೆ. ಎಸ್. ರಾಮೇಗೌಡರು | 1982–1984 |
| 29. | ಗುತ್ತಲಗೌಡರು | 1982–1987 |
| 30. | ಬಿ.ಟಿ. ಪಾರ್ಥಸಾರಥಿಯವರು | 1987–1990 |
| 31. | ಎ. ಅನಂತಪ್ಪನವರು | 1987–1990 |
| 32. | ಬಿ.ಟಿ. ಪಾರ್ಥಸಾರಥಿಯವರು | 1990–1993 |

| | | |
|---|---|---|
| 33. | ಎ. ಅನಂತಪ್ಪನವರು | 1990–1993 |
| 34. | ಟಿ. ಪಿಳ್ಳಭೈರಪ್ಪನವರು | 1993 |
| 35. | ವಿ. ಪಾಪಣ್ಣನವರು | 1993–1996 |
| 36. | ಬಿ. ಗಂಗಾಧರ್‌ರವರು | 1993–1996 |
| 37. | ಹೆಚ್.ಟಿ. ಕೃಷ್ಣೇಗೌಡರು | 1996–1997 |
| 38. | ಎಸ್. ಟಿ. ನಾರಾಯಣಗೌಡರು | 1996–1997 |
| 39. | ಶ್ರೀಮತಿ ಜಯಲಕ್ಷ್ಮಿ ಸಿದ್ದಯ್ಯನವರು | 1997–1998 |
| 40. | ಬಿ.ಆರ್. ಅರುಣ್‌ರವರು | 1997–1998 |
| 41. | ಟಿ. ಪಿಳ್ಳಭೈರಪ್ಪನವರು | 1998–2000 |
| 42. | ಎಸ್. ಟಿ. ನಾರಾಯಣಗೌಡರು | 1998–2000 |
| 43. | ಬಿ. ಗಂಗಾಧರ್‌ರವರು | 2000–2002 |
| 44. | ಲಕ್ಷ್ಮೀದೇವಮ್ಮನವರು | 2000–2002 |
| 45. | ಟಿ. ಪಿಳ್ಳಭೈರಪ್ಪನವರು | 2002 |
| 46. | ಲಕ್ಷ್ಮೀದೇವಮ್ಮನವರು | 2002 |
| 47. | ಬಿ. ಗಂಗಾಧರ್‌ರವರು | 2002 |
| 48. | ಬಿ.ಎನ್. ಗೋಪಾಲಗೌಡರು | 2002–2003 |
| 49. | ಎಸ್. ಟಿ. ನಾರಾಯಣಗೌಡರು | 2003 |
| 50. | ಎಂ. ಅಂಜನಪ್ಪನವರು | 2003–2004 |
| 51. | ಹೆಚ್.ಟಿ. ಕೃಷ್ಣೇಗೌಡರು | 2004–2008 |
| 52. | ಡಾ|| ಕೆ.ಪಿ. ಶ್ರೀನಿವಾಸಮೂರ್ತಿಯವರು | 2004–2008 |
| 53. | ಪ್ರೊ|| ಕೆ. ಮಲ್ಲಯ್ಯನವರು | 2008–2013 |
| 54. | ಹೆಚ್.ಎಲ್. ಶಿವಣ್ಣನವರು | 2008–2013 |
| 55. | ಅ. ದೇವೇಗೌಡರು | 2014 |
| 56. | ಡಾ|| ಬಿ. ಶಿವಲಿಂಗಯ್ಯನವರು | 2014 |
| 57. | ಸಿ.ಎನ್. ಶಶಿಕಿರಣ್ | 14–16 |
| 58. | ಅ. ದೇವೇಗೌಡರು | 2017–2017 |
| 59. | ಡಾ|| ಬಿ. ಶಿವಲಿಂಗಯ್ಯನವರು | 2017–18 |
| 60. | ಎನ್. ಪ್ರಸನ್ನ | 2017 –18 |

## 1906 ರಿಂದ 2019 ರ ಅವದಿಯಲ್ಲಿ ಕಾರ್ಯನಿರ್ವಹಿಸಿರುವ ಸಹಾಯಕ ಕಾರ್ಯದರ್ಶಿಗಳು

| ಕ್ರಮ ಸಂಖ್ಯೆ | ಶ್ರೀಯುತ | ಇಂದ–ವರೆಗೆ |
|---|---|---|
| 1. | ಬಿ. ಪುಟ್ಟಯ್ಯನವರು | 1907–1909 |
| 2. | ಬಿ. ಪುಟ್ಟಯ್ಯನವರು | 1990–1919 |
| 3. | ಬಿ.ಸಿ. ಹನುಮಯ್ಯನವರು | 1943–1949 |
| 4. | ಬಿ.ಟಿ. ಹನುಮಂತರಾಯಪ್ಪನವರು | 1949–1958 |
| 5. | ಎಂ. ಚಿನ್ನಾರೆಡ್ಡಿಯವರು | 1949–1958 |
| 6. | ಕೆ.ಎನ್. ತಮ್ಮಯ್ಯನವರು | 1958–1963 |
| 7. | ಕೆ. ರಾಮಚಂದ್ರರವರು | 1958–1963 |
| 8. | ಪಿ. ವೀರಪ್ಪನವರು | 1963–1964 |
| 9. | ಸಿ. ಪುಟ್ಟಸ್ವಾಮಿಯವರು | 1964–1972 |
| 10. | ಬಿ. ಗಂಗಾಧರ್ ರವರು | 1982–1987 |
| 11. | ಡಿ.ಬಿ. ಬಸವೇಗೌಡರು | 1987–1990 |
| 12. | ಎ. ಮಂಜುರವರು | 1991–1992 |
| 13. | ಎಸ್. ಟಿ. ನಾರಾಯಣಗೌಡರು | 1992–1993 |
| 14. | ಹೆಚ್.ಟಿ. ಕೃಷ್ಣೇಗೌಡರು | 1993–1994 |
| 15. | ಶ್ರೀಮತಿ ವಾಸಂತಿ ಶಿವಣ್ಣನವರು | 1994 |
| 16. | ಎಂ. ನಾರಾಯಣಗೌಡರು | 1994–1996 |
| 17. | ಬಿ. ಹೆಚ್. ಜಗದೀಶ್‌ರವರು | 1996–1997 |
| 18. | ಶ್ರೀಮತಿ ಲಕ್ಷ್ಮೀದೇವಮ್ಮನವರು | 1997 |
| 19. | ಬಿ. ಹೆಚ್. ಜಗದೀಶ್‌ರವರು | 2000–2002 |
| 20. | ಬಿ. ಹೆಚ್. ಜಗದೀಶ್‌ರವರು | 2002–2003 |
| 21. | ಡಾ॥ ಎಲ್. ಹನುಮಂತೇಗೌಡರು | 2003–2004 |
| 22. | ಅ. ದೇವೇಗೌಡರು | 2004 |
| 23. | ಆಡಿಟರ್ ನಾಗರಾಜ್ ಯಲಚವಾಡಿಯವರು | 2008–2013 |
| 24. | ಸಿ.ಎನ್. ಶಶಿಕಿರಣ್‌ರವರು | 2013 |
| 25. | ಹೆಚ್.ಎಂ. ನಾರಾಯಣಮೂರ್ತಿ | 2013–18 |

| ಕ್ರ. ಸಂ. | ಸಂಘದ ವತಿಯಿಂದ ನಡೆಸಲಾಗುತ್ತಿರುವ ವಿವಿಧ ವಿದ್ಯಾಸಂಸ್ಥೆಗಳು | ಪ್ರಾರಂಭವಾದ ವರ್ಷ |
|---|---|---|
| 01 | ವಿ.ವಿ.ಪುರ ಪದವಿ ಕಲೆ ಮತ್ತು ವಾಣಿಜ್ಯ ಹಗಲು ಮಹಾವಿದ್ಯಾಲಯ | 1961–62 |
| 02 | ವಿ.ವಿ.ಪುರ ಪದವಿ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ | 1966–67 |
| 03 | ವಿ.ವಿ.ಪುರ ಪದವಿಪೂರ್ವ ಕಲೆ ಮತ್ತು ವಾಣಿಜ್ಯ ಹಗಲು ಮಹಾವಿದ್ಯಾಲಯ | 1966–67 |
| 04 | ವಿ.ವಿ.ಪುರ ಪದವಿಪೂರ್ವ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ | 1966–67 |
| 05 | ವಿ.ವಿ.ಪುರ ಪದವಿ ವಿಜ್ಞಾನ ಮಹಾವಿದ್ಯಾಲಯ | 1966–67 |
| 06 | ವಿ.ವಿ.ಪುರ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯ | 1966–67 |
| 07 | ವಿ.ವಿ.ಪುರ ಕಾನೂನು ಮಹಾವಿದ್ಯಾಲಯ | 1972–73 |
| 08 | ಒಕ್ಕಲಿಗರ ಸಂಘ ಪ್ರೌಢಶಾಲೆ | 1974–75 |
| 09 | ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ ಎಂ.ಸಿ.ಎ. ಎಂ.ಬಿ.ಎ | 1979–80 |
| 10 | ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ವಿದ್ಯಾಲಯ | 1980–81 |
| 11 | ವಿ.ವಿ.ಪುರ ಔಷಧ ವಿಜ್ಞಾನ ಮಹಾವಿದ್ಯಾಲಯ | 1980–81 |
| 12 | ಒಕ್ಕಲಿಗರ ಸಂಘ ನರ್ಸರಿ, ಪ್ರೈಮರಿ ಮತ್ತು ಮಾಧ್ಯಮಿಕ ಶಾಲೆ | 1981–82 |
| 13 | ಶ್ರೀಗಂಧದಕಾವಲು ಕಿರಿಯ ಮಹಾವಿದ್ಯಾಲಯ | 1982–83 |
| 14 | ಒಕ್ಕಲಿಗರ ಸಂಘ ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ (ಎಂ.ಡಿ.ಎಸ್) | 1986–87 |
| 15 | ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ | 1990–91 |
| 16 | ಕೆಂಪೇಗೌಡ ಶುಶ್ರೂಷ ಮಹಾವಿದ್ಯಾಲಯ | 1990–91 |
| 17 | ಶ್ರೀಗಂಧದಕಾವಲು ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜು(ಕೆ.ಐ.ಎಂ.ಎಸ್.ಆರ್) | 1993–94 |
| 18 | ಕೆಂಪೇಗೌಡ ಪದವಿ ವಾಣಿಜ್ಯ ಸಂಜೆ ವಿದ್ಯಾಲಯ, ಶ್ರೀಗಂಧದಕಾವಲು | 2012–13 |
| 19 | ಒಕ್ಕಲಿಗರ ಸಂಘ ಕೈಗಾರಿಕಾ ತರಬೇತಿ ಕೇಂದ್ರ | 1993–94 |
| 20 | ಕೆಂಪೇಗೌಡ ಭೌತಿಕ ಚಿಕಿತ್ಸಾ ಮಹಾವಿದ್ಯಾಲಯ | 1997–98 |
| 21 | ಒಕ್ಕಲಿಗರ ಸಂಘ ಮುದ್ರಣಾಲಯ | 1990 |
| 22 | ಒಕ್ಕಲಿಗರ ಸಂಘ ಕಾರ್ಯಗಾರ | 1991 |
| | **ವಿದ್ಯಾರ್ಥಿ ನಿಲಯಗಳು :–** | |
| 1 | ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿ ನಿಲಯ | 1982 |
| 2 | ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿನಿಯರ ನಿಲಯ | 1982 |
| 3 | ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿನಿಲಯ | 1982 |
| 4 | ಕೆಂಪೇಗೌಡ ಶುಶ್ರೂಷ ವಿದ್ಯಾರ್ಥಿನಿಯರ ನಿಲಯ | 1990 |
| 5 | ಒಕ್ಕಲಿಗರ ಸಂಘ ಉಚಿತ ವಿದ್ಯಾರ್ಥಿ ನಿಲಯ | 1998 |
| 6 | ವಿದ್ಯಾರ್ಥಿನಿಯರ ವಸತಿ ನಿಲಯ, ತುಮಕೂರು | 2010 |
| 7 | ವಿದ್ಯಾರ್ಥಿನಿಯರ ಉಚಿತ ನಿಲಯ, ಮೈಸೂರು | 2012 |
| 8 | ಜೆ.ಪಿ.ನಗರ ಒಕ್ಕಲಿಗರ ಸಂಘದ ವಿದ್ಯಾರ್ಥಿನಿಯರ ನಿಲಯ | 2013 |
| 9 | ಕೆಂಪೇಗೌಡ ವೈದ್ಯಕೀಯ ಮಹಾವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿ ನಿಲಯ | 2014 |
| 10 | ಒಕ್ಕಲಿಗರ ಸಂಘ ದಂತ ಮಹಾವಿದ್ಯಾಲಯದ ವಿದ್ಯಾರ್ಥಿನಿಯರ ನಿಲಯ | 2013 |